# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 169 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 28-01-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ (KSHIP) 2024 ರಿಂದ ಈವರೆಗೂ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ರಸ್ತೆಯ (Connecting roads) ಯಾವ ಯಾವ ರಸ್ತೆ ಕಾಮಗಾರಿಗಳ ಯೋಜನೆಯನ್ನು ರೂಪಿಸಲಾಗಿದೆ: ಪ್ರತಿ ಕಾಮಗಾರಿಯ ವೆಚ್ಚವೆಷ್ಟು: ಕಾಮಗಾರಿಗಳು ಯಾವ ಹಂತದಲ್ಲಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು)</td><td>ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ವತಿಯಿಂದ ರಾಜ್ಯ ಸರ್ಕಾರದ ಅನುದಾನದಡಿಯಲ್ಲಿ 2024 ರಿಂದ ಈವರೆಗೂ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ಈ ಕೆಳಕಂಡ ರಸ್ತೆಗಳನ್ನು ಹೈಬ್ರಿಡ್ ವರ್ಷಾಸನ ಮಾದರಿಯಲ್ಲಿ (HAM) ಅಭಿವೃದ್ಧಿಪಡಿಸುವ ಯೋಜನೆಗಳನ್ನು ರೂಪಿಸಿ ಅನುಮೋದನೆ ನೀಡಲಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ.
<table>
<tr><th>ಕ್ರ.ಸಂ.</th><th>ಕಾಮಗಾರಿ/ ಪ್ಯಾಕೇಜ್ ವಿವರ</th><th>ಯೋಜನಾ ಮೊತ್ತ (ರೂ. ಕೋಟಿಗಳಲ್ಲಿ)</th><th>ಪ್ರಸ್ತುತ ಹಂತ</th></tr>
<tr><td>1</td><td>ಪ್ಯಾಕೇಜ್-01: ವೇಮಗಲ್- ಮಾಲೂರು ಮತ್ತು ಮಾಲೂರು ಕೈಗಾರಿಕಾ ಪ್ರದೇಶ- ತಮಿಳುನಾಡು ಗಡಿಯವರೆಗೆ</td><td>958.00</td><td>ಟೆಂಡರ್ ಆರ್ಥಿಕ ಬಿಡ್ ಪರಿಶೀಲನೆಯಲ್ಲಿರುತ್ತದೆ.</td></tr>
<tr><td>2</td><td>ಪ್ಯಾಕೇಜ್-02: ಹೊಸಕೋಟೆ- ಮಾಲೂರು, ಮಾಲೂರಿನಲ್ಲಿ Elevated Corridor ಸೇರಿ ಮಾಲೂರು ಕೈಗಾರಿಕಾ ಪ್ರದೇಶ ಒಳಗೊಂಡಂತೆ.</td><td>1054.00</td><td>ದಿನಾಂಕ: 06-01-2026 ರಂದು ನೇಮಕಾತಿ ದಿನಾಂಕ ಘೋಷಿಸಿ, ಕಾಮಗಾರಿ ಪ್ರಾರಂಭಿಸಲಾಗಿರುತ್ತದೆ.</td></tr>
</table>
ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ (KSHIP) ಮೂಲತ: ಬಾಹ್ಯ ಹಣಕಾಸಿನ ನೆರವಿನೊಂದಿಗೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು. ಸದರಿ ಯೋಜನೆಯಡಿಯಲ್ಲಿ 2024 ರಿಂದ ಈವರೆಗೂ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಸ್ತಾವನೆ ಇರುವುದಿಲ್ಲ.</td></tr>
</table>

<table>
<tr>
<td>ಆ)</td>
<td>ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಪಡಿಯಲ್ಲಿ 2024 ರಿಂದ ಈವರೆಗೂ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ರಸ್ತೆಯ (Connecting roads) ಯಾವ ಯಾವ ರಸ್ತೆ ಕಾಮಗಾರಿಗಳ ಯೋಜನೆಯನ್ನು ರೂಪಿಸಲಾಗಿದೆ; ಪ್ರತಿ ಕಾಮಗಾರಿಯ ವೆಚ್ಚವೆಷ್ಟು; ಕಾಮಗಾರಿಗಳು ಯಾವ ಹಂತದಲ್ಲಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು)</td>
<td>ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ 2024 ರಿಂದ ಈವರೆಗೂ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ಈ ಕೆಳಕಂಡ ರಸ್ತೆಯನ್ನು ಹೈಬ್ರಿಡ್ ವರ್ಷಾಸನ ಮಾದರಿಯಲ್ಲಿ (HAM) ಅಭಿವೃದ್ಧಿಪಡಿಸುವ ಯೋಜನೆ ರೂಪಿಸಿ ಅನುಮೋದನೆ ನೀಡಲಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ.
<table>
<tr><th>ಕ್ರ.ಸಂ.</th><th>ಕಾಮಗಾರಿ/ ಪ್ಯಾಕೇಜ್ ವಿವರ</th><th>ಯೋಜನಾ ಮೊತ್ತ (ರೂ. ಕೋಟಿಗಳಲ್ಲಿ)</th><th>ಪ್ರಸ್ತುತ ಹಂತ</th></tr>
<tr><td>1</td><td>ಪ್ಯಾಕೇಜ್–03: ದೇವನಹಳ್ಳಿ–ವೇಮಗಲ್–ಕೋಲಾರ.</td><td>1178.00</td><td>ಟೆಂಡರ್ ಆರ್ಥಿಕ ಬಿಡ್ ಪರಿಶೀಲನೆಯಲ್ಲಿರುತ್ತದೆ.</td></tr>
</table>
</td>
</tr>
<tr>
<td>ಇ)</td>
<td>ವೇಮಗಲ್‌ನಿಂದ ತಮಿಳುನಾಡು ಗಡಿಯ ಕಿ.ಮೀ.36.586 ವರೆಗಿನ ಉದ್ದಕ್ಕೆ ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆಯ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು)</td>
<td>ವೇಮಗಲ್–ಮಾಲೂರು ಮತ್ತು ಮಾಲೂರು ಕೈಗಾರಿಕಾ ಪ್ರದೇಶ–ತಮಿಳುನಾಡು ಗಡಿಯವರೆಗಿನ 36.586 ಕಿ.ಮೀ ಉದ್ದದ ರಸ್ತೆಯನ್ನು ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಆನ್ಯೂಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಸಂಬಂಧಿಸಿದಂತೆ, ಪ್ರಸ್ತುತ ಕಾಮಗಾರಿಯ ಟೆಂಡರ್ ಮೌಲ್ಯಮಾಪನ ಹಂತದಲ್ಲಿರುತ್ತದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಿ ಕನಿಷ್ಠತಮ ಬಿಡ್‌ದಾರರಾಗಿದ್ದ M/s Ramalingam Construction Company Pvt. Ltd. ರವರು ಪ್ಯಾಕೇಜ್–3 ಕಾಮಗಾರಿಗೆ ಸಂಬಂಧಪಟ್ಟಂತೆ ಡಿಬಾರ್ ಆಗಿದ್ದು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P No.24912/2025 ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:09–12–2025 ರಂದು ನೀಡಿರುವ ಅಂತಿಮ ತೀರ್ಪಿನಲ್ಲಿ ಸದರಿಯವರ ರಿಟ್ ಪಿಟಿಷನ್ ವಜಾ ಮಾಡಲಾಗಿರುತ್ತದೆ. ಈ ಸಂಬಂಧ ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮವಹಿಸಬೇಕಾಗಿರುತ್ತದೆ. ಇದರಿಂದಾಗಿ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬವಾಗಿರುತ್ತದೆ. ಈ ಕುರಿತು ನಿಯಮಾನುಸಾರ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.</td>
</tr>
<tr>
<td>ಈ)</td>
<td>ರಾಜ್ಯದಲ್ಲಿ ಹೊಸಕೋಟೆಯಿಂದ ಮಾಲೂರುವರೆಗೆ ಹಾಗೂ ಮಾಲೂರು ಎಲಿವೇಟೆಡ್ ಕಾರಿಡಾರ್‌ನ ಮಾಲೂರು ಕೈಗಾರಿಕಾ ಪ್ರದೇಶದ ಕಿ.ಮೀ 25.615 ವರೆಗಿನ ಉದ್ದಕ್ಕೆ ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆಯ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು)</td>
<td>ರಾಜ್ಯದಲ್ಲಿ ಹೊಸಕೋಟೆಯಿಂದ ಮಾಲೂರುವರೆಗೆ ಹಾಗೂ ಮಾಲೂರು Elevated Corridor ಸೇರಿ ಮಾಲೂರು ಕೈಗಾರಿಕಾ ಪ್ರದೇಶ ಒಳಗೊಂಡ 25.615 ಕಿ.ಮೀ ಉದ್ದದ ರಸ್ತೆಯನ್ನು ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಆನ್ಯೂಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಸಂಬಂಧಿಸಿದಂತೆ, ಪ್ರಸ್ತುತ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ದಿನಾಂಕ:17–10–2025 ರಂದು M/s Hoskote Malur Highways Pvt. Ltd., ರವರೊಂದಿಗೆ ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಅದರಂತೆ, ದಿನಾಂಕ:06–01–2026 ರಂದು ನೇಮಕಾತಿ ದಿನಾಂಕ (Appointed date) ವನ್ನು ಘೋಷಿಸಲಾಗಿದ್ದು, ಪ್ರಸ್ತುತ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.</td>
</tr>
</table>

| | | |
|---|---|---|
| ಉ) | ದೇವನಹಳ್ಳಿ-ವೇಮಗಲ್-ಕೋಲಾರ ಕಿ.ಮೀ 49.284 ವರೆಗಿನ ಉದ್ದಕ್ಕೆ ಪಿಪಿಪಿ-ಡಿಬಿಎಫ್‌ಒಎಂಟಿ-ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆಯ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | ದೇವನಹಳ್ಳಿ-ವೇಮಗಲ್-ಕೋಲಾರ ವರೆಗಿನ 48.20 ಕಿ.ಮೀ ಉದ್ದದ ರಸ್ತೆಯನ್ನು ಪಿಪಿಪಿ-ಡಿಬಿಎಫ್‌ಒಎಂಟಿ-ಹೈಬ್ರಿಡ್ ಆನ್ಯೂಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಸಂಬಂಧಿಸಿದಂತೆ, ಪ್ರಸ್ತುತ ಕಾಮಗಾರಿಯ ಟೆಂಡರ್ ಮೌಲ್ಯಮಾಪನ ಹಂತದಲ್ಲಿರುತ್ತದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಿ ಕನಿಷ್ಠತಮ ಬಿಡ್‌ದಾರರಾಗಿದ್ದ M/s MP-24 and M/s Ramalingam Construction Company Pvt. Ltd. (Consortium) ರವರು ನಕಲಿ ದಾಖಲಾತಿ ಸಲ್ಲಿಕೆ ಕುರಿತಂತೆ ಡಿಬಾರ್ ಆಗಿದ್ದು, ಸದರಿ ಒಕ್ಕೂಟದ ಇಬ್ಬರು ಗುತ್ತಿಗೆದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P No.24912/2025, W.P No.25668/2025, W.P No.22904/2025 ಮತ್ತು W.P No.31906/2025 ದಾಖಲಿಸಿರುತ್ತಾರೆ. ಸದರಿ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:09-12-2025 ರಂದು ನೀಡಿರುವ ಅಂತಿಮ ತೀರ್ಪಿನಲ್ಲಿ ಸದರಿಯವರುಗಳ ರಿಟ್ ಪಿಟಿಷನ್‌ಗಳನ್ನು ವಜಾ ಮಾಡಲಾಗಿರುತ್ತದೆ. ಈ ಸಂಬಂಧ ಕಾನೂನು ಮತ್ತು ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದು ಮುಂದಿನ ಕ್ರಮವಹಿಸಬೇಕಾಗಿರುತ್ತದೆ. ಇದರಿಂದಾಗಿ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬವಾಗಿರುತ್ತದೆ. ಈ ಕುರಿತು ನಿಯಮಾನುಸಾರ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ. ಲೋಇ 31 ಇಎಪಿ 2026

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು